**೨ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.**

# ಸಿ.ಸಿ. 775/2021

ಸಾಕ್ಷಿದಾರರ ಹೇಳಿಕೆ ಃ

| | | | |
|---|---|---|---|
| ಹೆಸರು | ಃ | ಮಂಜುನಾಥ್ | ಚಾಸಾಃ **22** ಪ್ರಾಸಾಃ **8** |
| ತಂದೆಯ ಹೆಸರು | ಃ | ಕರಿಯಣ್ಣ | |
| ವಯಸ್ಸು | ಃ | 42 ವರ್ಷ | |
| ವೃತ್ತಿ | ಃ | ಪಿ.ಎಸ್.ಐ., ಮದ್ದೂರು ಪೊ.ಠಾ. | |
| ವಾಸಸ್ಥಳ | ಃ | ಮದ್ದೂರು. | |

ದಿನಾಂಕಃ **30.10.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01.** ನಾನು ದಿನಾಂಕಃ 21.08.2021 ರಿಂದ 12.10.2023 ರವರೆಗೆ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ.ಆಗಿ ಕರ್ತವ್ಯ ನಿರ್ವಹಿಸಿದ್ದೇನು.

**02**. ದಿನಾಂಕಃ 24.09.2021 ರಂದು ಚಾ,ಸಾ-1 ರವರು ನನ್ನ ಮುಂದೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು, ಈಗಾಗಲೇ ಠಾಣಾ ಮೊ.ಸಂಖ್ಯೆಃ 149/2021 ರಲ್ಲಿ

ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ತನಿಖೆ ನಡೆಸಲು ಹೆಚ್ಚುವರಿ ಕಲಂ 304(ಎ) ಅಳವಡಿಸಲು ಅನುಮತಿ ಕೋರಿರುತ್ತೇನೆ. ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**2(**ಬಿ**)** ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಚಾ.ಸಾ-23 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಾದ ಶ್ರೀ ಎಸ್.ಜೆ.ರವರಿಂದ ಃ</u>

**1.** ಈ ಪ್ರಕರಣದಲ್ಲಿ ಈಗಾಗಲೇ ಅಂತಿಮ ವರದಿಯನ್ನು ಸಲ್ಲಿಸಿದ್ದು ಪ್ರಕರಣ ಮುಕ್ತಾಯಗೊಂಡಿತ್ತು ಎಂದರೆ ಸರಿ. ಅದೇ ಪ್ರಕರಣಕ್ಕೆ ಸಂಬಂದಿಸಿದಂತ ನಾನು ಮತ್ತೆ ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮೃತ ಎಸ್.ಕೆ. ನಾಗೇಶ್ ರವರು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಶ್ವಾಸ ಕೋಷದ ತೊಂದರೆಯಿಂದ ಬಳಲುತ್ತಿದ್ದು, ಆ ಕಾರಣ ಮೃತ ಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮೃತನ ಕುಟುಂಬದವರು ವಿಮಾ ಪರಿಹಾರದ ಅರ್ಜಿ ಸಲ್ಲಿಸಿದ್ದು, ಅವರಿಗೆ ಅನುಕೂಲವಾಗಲೆಂದು ಸುಳ್ಳು ದೂರನ್ನು ಪಡೆದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**
**(**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು**.)**

ಓ**.** ಹೇ**.** ಕೇ**.** ಸ**.** ಇದೆ**.**

**C/C 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ**.**ಎಂ**.**ಎಫ್**.**ಸಿ**.,**
ಪಾಂಡವಪುರ**.**

ಸಾಕ್ಷಿದಾರರ ಸಹಿ**.**